# ಮದುವೆ ಅನರ್ಹತೆ ಅಲ್ಲ!



ಮದುವೆ ಆದರೆ ಸಿನಿಮಾ ಬದುಕು ಮುಗಿಯಿತು ಎನ್ನುವುದು ನಟಿಯರ ಪಾಲಿಗೆ ಅಲಿಖಿತ ನಿಯಮ. ಸಂಸಾರ ನೌಕೆ ಏರಿದ ನಂತರ ಬಣ್ಣದ ಬದುಕಿನಿಂದ ನಿವೃತ್ತಿಯೇ ಸರಿ ಎನ್ನುವ ಜಾಯಮಾನ ಈಗ ಬದಲಾಗುತ್ತಿದೆ. ಕಾಜೋಲ್, ರಾಣಿ ಮುಖರ್ಜಿ, ವಿದ್ಯಾ ಬಾಲನ್ ಎಲ್ಲರೂ ತಮಗೆ ಮದುವೆಯಾದದ್ದೇ ಸುಳ್ಳು ಎನ್ನುವಂತೆ ಮತ್ತೆ ಹಿಂದಿನ ಅವತಾರಕ್ಕೆ ಮರಳುತ್ತಿದ್ದಾರೆ. 'ಮದುವೆ ಎನ್ನುವುದು ನಟಿಯರ ಪಾಲಿನ ಭವಿಷ್ಯದ ಸಿನಿ ಜೀವನದ ಅನರ್ಹತೆ ಎನ್ನುವುದನ್ನು ನಾನು ಒಪ್ಪುವುದಿಲ್ಲ' ಎನ್ನುತ್ತಾರೆ ಹಿರಿಯ ನಟಿ ಶಬಾನಾ ಆಜ್ಮಿ.

'ಮಹಿಳಾ ಕಲಾವಿದರ ವೃತ್ತಿ ಬದುಕಿಗೆ ಮದುವೆ ಎನ್ನುವುದು ಲಕ್ಷ್ಮಣ ರೇಖೆ ಎನ್ನುವುದು ಬಹಳ ಹಳೆಯ ಕಲ್ಪನೆ. ಆ ಕಾಲಘಟ್ಟದ ಸ್ಥಿತಿ ಈಗಲೂ ಉಳಿದಿಲ್ಲ. ಮದುವೆಯನ್ನು ಸಿನಿಮಾ ವೃತ್ತಿಯನ್ನು ಅನರ್ಹಗೊಳಿಸುವ ಹೊಣೆ ಎನ್ನುವುದನ್ನು ನಾನು ಒಪ್ಪಿಕೊಳ್ಳುವುದಿಲ್ಲ' ಎಂದಿದ್ದಾರೆ ಶಬಾನಾ.

'ತಕ್ಕ ವಯಸ್ಸಿಗೆ ಬಂದಾಗ ನಟಿಯರು ಮದುವೆಯಾಗುತ್ತಾರೆ. ಅದುವರೆಗೂ ಹೀರೊಯಿನ್ ಪಟ್ಟಕ್ಕೆ ಸೂಕ್ತವೆನಿಸುವ ಮುಂಚೂಣಿ ಪಾತ್ರಗಳನ್ನು ವಹಿಸುತ್ತಿದ್ದವರು, ಸಂಸಾರದ ನೊಗ ಹೊತ್ತ ನಂತರ ಆ ವಯಸ್ಸು ಮತ್ತು ಹೊಣೆಗಾರಿಕೆಗೆ ಸೂಕ್ತವೆನಿಸುವ ಪಾತ್ರಗಳನ್ನು ಬಯಸುತ್ತಾರೆ. ಅವರ ವಯಸ್ಸಿಗೆ ಅನುಗುಣವಾದ ಪಾತ್ರಗಳೇ ಅವರನ್ನು ಅರಸಿ ಬರುತ್ತವೆ' ಎಂದಿದ್ದಾರೆ ಅವರು.

1960ರಲ್ಲಿ ಮೀನಾ ಕುಮಾರಿ 'ಮೇ ಚುಪ್ ರಹೂಂಗಿ' ಚಿತ್ರದ ನಾಯಕಿಯಾಗಿದ್ದರು. ಅದರಲ್ಲಿ ಮಹಿಳೆ ಮೌನವಾಗಿ ಇರುವುದು ಆಕೆಗೆ ಭೂಷಣ ಎಂದು ತೋರಿಸಿದ್ದರು. ಆಗ ಬರುತ್ತಿದ್ದ ಸಿನಮಾಗಳೂ ಅಂತಹದ್ದನ್ನೇ ಪ್ರತಿಪಾದಿಸುತ್ತಿದ್ದವು. ಅದೃಷ್ಟವಷಾತ್ ಈಗ ಎಲ್ಲ ಬದಲಾಗುತ್ತಿದೆ. ನಮ್ಮ ಅನೇಕ ನಟಿಯರು ಸಿನಿಮಾಗಳನ್ನು ಮಾಡುತ್ತಿದ್ದಾರೆ ಮತ್ತು ಅವರಿಗಾಗಿಯೇ ಸಿನಿಮಾ ಸೃಷ್ಟಿಯಾಗುತ್ತಿವೆ. ಮುಖ್ಯವಾಗಿ ಅವು ವ್ಯಾವಹಾರಿಕ ಗೆಲುವು ಪಡೆದುಕೊಳ್ಳುತ್ತಿವೆ ಎಂದಿದ್ದಾರೆ ಶಬಾನಾ.



## ನಟಿಯಾಗುವ ಕನಸು ಕಾಣದವಳು!

2014ರಲ್ಲಿ 'ಕಿಲ್ ದಿಲ್' ಚಿತ್ರದಲ್ಲಿ ಹಿರಿ ಪರದೆಯಲ್ಲಿ ಕಾಣಿಸಿಕೊಂಡ ಮೂರು ವರ್ಷದ ಬಳಿಕ ಪರಿಣೀತಿ ಚೋಪ್ರಾ 'ಬಿಂದು'ವಾಗಿ ಬರುತ್ತಿದ್ದಾಳೆ. ಆಯುಷ್ಮಾನ್ ಖುರಾನಾ ಜತೆ ಪರಿಣೀತ ತೆರೆ ಹಂಚಿಕೊಂಡಿರುವ 'ಮೇರಿ ಪ್ಯಾರಿ ಬಿಂದು' ಚಿತ್ರದ ಟ್ರೇಲರ್ ಬಿಡುಗಡೆಯಾಗಿದೆ. ಈ ಚಿತ್ರದಲ್ಲಿ ಮನೆಯವರ ಮುದ್ದಿನ ಕೂಸಾಗಿ, ಗೆಳೆಯನ ಪ್ರೀತಿಯ ಇನಿಯಳಾಗಿ ಪರಿಣೀತಿ ಕಾಣಿಸಿಕೊಂಡಿದ್ದಾಳೆ. ಆದರೆ ತನ್ನ ಬಾಲ್ಯ ಈ ಪಾತ್ರಕ್ಕೆ ತದ್ವಿರುದ್ಧ ಎಂದಿದ್ದಾಳೆ ಆಕೆ. ತನ್ನದು 'ನಾನ್ ರೊಮ್ಯಾಂಟಿಕ್' ಬಾಲ್ಯ. ಆದರಲ್ಲಿ ಎಳ್ಳಷ್ಟೂ ಪ್ರೀತಿ ಅನುಭವಿಸಿರಲಿಲ್ಲ. ಓದಿನ ಹೊರತಾಗಿ ಬೇರೆ ಗುರಿಯೂ ಇರಲಿಲ್ಲ ಎಂದು ನೆನಪು ಕೆದಕಿದ್ದಾಳೆ. ಈ ಮೂರು ವರ್ಷದ ಅಂತರ ತನ್ನ ಬದುಕಿಗೆ ಅತಿ ಮಹತ್ವದ್ದು ಎಂದಿದ್ದಾಳೆ ಆಕೆ. ತನ್ನ ವೈಯಕ್ತಿಕ ಮತ್ತು ವೃತ್ತಿ ಜೀವನದಲ್ಲಿ ಅನೇಕ ಬದಲಾವಣೆಗಳನ್ನು ಈ ಅವಧಿಯಲ್ಲಿ ಕಂಡಿರುವುದಾಗಿ ಹೇಳಿದ್ದಾಳೆ.

'ಸಿನಿಮಾ ನಟಿಯಾಗುವುದು ಎಂದಿಗೂ ನನ್ನಕನಸು ಆಗಿರಲಿಲ್ಲ' ಎನ್ನುತ್ತಾಳೆ ಪರಿಣೀತಿ. 'ಮೊದಲ ಸಿನಿಮಾ ಬಿಡುಗಡೆಯಾದ ಬಳಿಕವೇ ನನಗೆ ಆ ಕನಸಿನೊಂದಿಗೆ ಜೀವಿಸುತ್ತಿದ್ದೆ ಎಂಬುದು ಅರಿವಾಗಿದ್ದು. ಸಾವಿರಾರು ಜನರು ಬಂದು ನನ್ನ ಸಿನಿಮಾ ನೋಡುತ್ತಿದ್ದರು. ನನ್ನನ್ನು ಪ್ರೀತಿಸಿದರು. ರಸ್ತೆಯಲ್ಲಿ ನನ್ನನ್ನು ಮುತ್ತಿಕ್ಕಿದರು...' ಎಂದು ಮತ್ತೆ ಕನಸಿನ ಲೋಕಕ್ಕೆ ಜಾರಿದವಳಂತೆ ಹೇಳಿದ್ದಾಳೆ.

■ ಅಮಿ